ಕಣ್ಣಿಗೆ ಕಾಣದಿದ್ದರೂ ಆ ಹೆತ್ತ ಕರುಳಿಗೆ ದಿನಗಳು ಸರಿದಂತೆ ಎಲ್ಲವೂ ಸ್ಪಷ್ಟವಾಗತೊಡಗಿತು... ಹಾಗಾಗಿ ವಾಸುದೇವರ ಅಮ್ಮ ಮಗನ ಮದುವೆಗಾಗಿ ಮತ್ತೊಮ್ಮೆ ಇನ್ನಿಲ್ಲದ ಪ್ರಯತ್ನ ಮಾಡತೊಡಗಿದರು. ಆದರೆ ಯಾವ ದುರದೃಷ್ಟವೋ? ಅವರ ಎಲ್ಲಾ ಪ್ರಯುತ್ನ ನಿಷ್ಫಲವಾಗುತ್ತಲೇ ಹೋಯಿತು.

ವಾಸುದೇವರಂತೂ ಈ ಕುರಿತು ಸಂಪೂರ್ಣ ನಿರಾಸಕ್ತಿ ತಾಳಿ ಬಿಟ್ಟರು! ಅಮಾಯಕ ಹೆಣ್ಣೊಬ್ಬಳ ಕೈ ಹಿಡಿದು ಎರಡು ಜೀವಗಳಿಗೆ ಮೋಸವೆಸಗುವುದಕ್ಕಿಂತ ಏಕಾಂಗಿಯಾಗಿರುವುದೇ ಲೇಸು ಎನ್ನುವ ನಿರ್ಧಾರ ಅವರಲ್ಲೀಗ ಗಟ್ಟಿಯಾಗಿತ್ತು. ಸೋಮ ಮಾತ್ರ ಎಲ್ಲದರಿಂದಲೂ ವಿಮುಖವಾದಂತೆ, ಒಂದು ತೆರದ ನಿರ್ಲಿಪ್ತ ನಿರಾಳ ಭಾವದಲ್ಲಿ ದಿನಗಳೆಯಲಾರಂಭಿಸಿದ್ದ.

ವಾಸುದೇವರ ಅಮ್ಮನಿಗೋ ಇದ್ದೊಬ್ಬ ಮಗನ ಮನಸ್ಸನ್ನು ಯಾವ ಕಾರಣಕ್ಕೂ ನೋಯಿಸಲು ಆಗದೆ ಮತ್ತು ದೇವಿಯ ಮೋಹದ ಸೆರೆಯಿಂದ ಬಿಡಿಸುವ ದಾರಿಯೂ ಕಾಣದೆ ದಿಕ್ಕೇ ತೋಚದಂತಾಗಿತ್ತು! ಅಂತೂ ದೇವಿ ಕಣ್ಣೆದುರಿಗಿರುವಷ್ಟು ಕಾಲ ಮಗ ಅವಳ ಸಂಗವನ್ನು ಏನೇ ಆದರೂ ತ್ಯಜಿಸಲಾರ ಎಂಬುದು ಅವರಿಗೀಗ ಖಚಿತವಾಗಿತ್ತು.

ಹೀಗಿರುತ್ತಾ, ಈ ಸಮಸ್ಯೆ ಪರಿಹಾರಕ್ಕೆ ಅವರಿಗೊಂದು ಅವಕಾಶ ಅನಿರೀಕ್ಷಿತವಾಗಿ ಒದಗಿ ಬಂದಿತು. ಆಗ ವಾಸುದೇವರು ಬಹುಕಾಲದ ನಂತರ ಮೈಸೂರಿನ ತಮ್ಮ ಹಳೆಯ ಮಿತ್ರರೊಂದಿಗೆ ಉತ್ತರ ಭಾರತದ ತಿರುಗಾಟಕ್ಕೆಂದು ಹತ್ತು ದಿವಸಗಳ ಮಟ್ಟಿಗೆ ಹೊರಟು ಹೋಗಿದ್ದರು. ಇದೇ ತಕ್ಕ ಸಮಯ ಎಂದುಕೊಂಡ ಅವರಮ್ಮ ಕೊನೆಗೂ ಒಂದು ನಿರ್ಧಾರಕ್ಕೆ ಬಂದು, ಗಟ್ಟಿ ಮನಸು ಮಾಡಿ, ಸೋಮ ಮತ್ತು ದೇವಿಯನ್ನು ಅಂದು ಬೆಳಿಗ್ಗೆ ತನ್ನಲ್ಲಿಗೆ ಬರಮಾಡಿಕೊಂಡರು.

**ಮಗನೊಂದಿಗೆ ಅಚಾನಕವಾಗಿ ಬಂದ ಸನ್ಯಾಸಿಯಂತೆ ಕಾಣುವ ಈ ಗಡ್ಡಧಾರಿ ಹಿರಿಯರನ್ನು ಕಂಡು ದೇವಕಿಗೊಮ್ಮೆ ಆಶ್ಚರ್ಯವಾಯಿತು! ವಾಸುದೇವರಿಗೋ, ತೊರೆದುಹೋಗಿದ್ದರೂ ಮರೆತು ಹೋಗದ ದೇವಿಯನ್ನು ಕಂಡು ಎದೆತುಂಬಿ ಬಂದ ಗಳಿಗೆಯಾಗಿತ್ತದು!**

ಸೋಮ ಮತ್ತು ದೇವಿ ಬಂದು ಎದುರು ನಿಲ್ಲುತ್ತಲೇ, “ಸೋಮಾ, ನೀನು ಈ ಮನೆಯ ಮಗನಂತಿದ್ದವನು... ನನ್ನ ಮಾತಿಗೆ ‘ಯಾಕೆ, ಏನು, ಎತ್ತ?’ ಎನ್ನುವ ಯಾವ ಪ್ರಶ್ನೆಯನ್ನು ನೀನು ಕೇಳಬಾರದು... ಅನ್ನ ತಿಂದ ಈ ಮನೆಗೆ ಒಳ್ಳೆಯದಾಗಬೇಕೆಂದು ನಿನ್ನ ಮನಸ್ಸಲ್ಲಿದ್ದರೆ ಎರಡು ದಿನಗಳೊಳಗೆ ನೀವಿಬ್ಬರು ಇಲ್ಲಿಂದ ದೂರಕ್ಕೆಲ್ಲಾದರೂ ಹೊರಟುಹೋಗಿ ಅಲ್ಲಿ ನಿಮ್ಮ ಪಾಡಿಗೆ ಸುಖವಾಗಿರಿ...” ಹೀಗೆ ಹೇಳುವಾಗಲೇ ಗಂಟಲು ಕಟ್ಟಿಬಂದು ಮತ್ತವರು ಮಾತನಾಡದಾದರು! ಸೋಮ ಮತ್ತು ದೇವಿ ಈ ಅನಿರೀಕ್ಷಿತ ಆಘಾತದಿಂದ ತತ್ತರಿಸಿ, ಗರಬಡಿದವರಂತಾದರು! ಆದರೆ ಅಮ್ಮನೀಗ ಬೇರೇನನ್ನೂ ಮಾತಾಡುವ ಸ್ಥಿತಿಯಲ್ಲಿರಲಿಲ್ಲ ಮತ್ತು ಅವರ ಆದೇಶ ಪಾಲನೆಯೊಂದೇ ತಮಗುಳಿದ ಏಕೈಕ ದಾರಿ ಎಂದವರಿಗೆ